ರಾಜ್ಯದಲ್ಲಿರುವ ಒಟ್ಟು ಕಂದಾಯ ಹೋಬಳಿಗಳು

1568 - ಶ್ರೀ ಬಿ. ರಾಜೂಗೌಡ (ಹನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಕಂದಾಯ ಹೋಬಳಿಗಳೆಷ್ಟು?

ಆ) ಎಷ್ಟು ಹೋಬಳಿಗಳಲ್ಲಿ ನಾಡ ಕಛೇರಿ ಪ್ರಾರಂಭ ಮಾಡಲಾಗಿದೆ?

ಇ) ಉಳಿದ ಕಡೆ ಸರ್ಕಾರ ಯಾವಾಗ ಪ್ರಾರಂಭ ಮಾಡುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) :

ಅ) 671.

ಆ) 331.

ಇ) ಸದ್ಯಕ್ಕೆ ನಾಡ ಕಛೇರಿಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿಲ್ಲ.

ಕನಿಷ್ಠ ವೇತನ ಕಾಯಿದೆ ಇರುವ ಕೈಗಾರಿಕೆಗಳು

1570 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಕೈಗಾರಿಕೆಗಳು ಕನಿಷ್ಠ ವೇತನ ಕಾಯಿದೆ ವ್ಯಾಪ್ತಿಗೆ ಒಳಪಡುತ್ತವೆ?

ಆ) ರಾಜ್ಯದ ಎಷ್ಟು ಜನ ಕೃಷಿ ಕಾರ್ಮಿಕರು ಈ ಕಾಯಿದೆಗೆ ಒಳಪಡುತ್ತಾರೆ?

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) :

1. ರೆಸಿಡೆನ್ಷಿಯಲ್ ಹೋಟೆಲ್ಸ್ ಮತ್ತು ಈಟಿಂಗ್ ಹೌಸಸ್.
2. ಟೈಲರಿಂಗ್
3. ಕಾಫಿ ಕ್ಯೂರಿಂಗ್
4. ಫಿಲಂ ಇಂಡಸ್ಟ್ರೀ
5. ಅಗರಬತ್ತಿ
6. ಕಾಟನ್ ಜಿನ್ನಿಂಗ್ ಮತ್ತು ಪ್ರೆಸಿಂಗ್
7. ಅಕ್ಕಿ, ಬೇಳೆ ಮತ್ತು ಹಿಟ್ಟಿನ ಗಿರಣಿಗಳು.,
8. ಕೃಷಿ
9. ಪ್ರಿಂಟಿಂಗ್ ಪ್ರೆಸ್
10. ಸಿರೆಮಿಕ್ಸ್ ಸ್ಟೋನ್‌ವೇರ್ ಮತ್ತು ಪೋಟೆರೀಸ್ ವರ್ಕ್ಸ್
11. ರಸ್ತೆ ನಿರ್ಮಾಣ ಅಥವಾ ನಿರ್ವಹಣೆ, ಕಟ್ಟಡ ನಿರ್ಮಾಣದ ಕೆಲಸ
12. ರೇಷ್ಮೆ
13. ಸಾರ್ವಜನಿಕ ಮೋಟಾರ್ ವಾಹನ
14. ಕಲ್ಲು ಒಡೆಯುವುದು ಅಥವಾ ಕಲ್ಲು ಪುಡಿಮಾಡುವುದು.
15. ಸ್ಟೋನ್‌ಬ್ರೇಕಿಂಗ್ ಅಥವಾ ಸ್ಟೋನ್ ಕ್ರಷಿಂಗ್ ಆಪರೇಷನ್ಸ್, ಕ್ಯಾರೀಡ್ ಆನ್‌ಇನ್ ಎನ್‌ಕ್ವೈರಿ.
16. ಟ್ಯಾನರೀಸ್ ಮತ್ತು ಲೆದರ್ ಮ್ಯಾನುಫ್ಯಾಕ್ಚರರ್ಸ್.
17. ಕಾರ್‌ಡಮಮ್ ಮಾಲೀಸ್ ಅಂಡ್ ಕಾರ್‌ಡಮಮ್ ಗಾರ್ಡನ್ಸ್